SET-4

Series &RQPS

Q.P. Code **15**

रोल नं.
Roll No. | | | | | | | | |

Candidates must write the Q.P. Code on the title page of the answer-book.

**नोट**

(I) ಈ ಪ್ರಶ್ನೆಪತ್ರಿಕೆಯಲ್ಲಿ **15** ಮುದ್ರಿತ ಪುಟಗಳಿವೆಯೆಂಬುದನ್ನು ಪರಿಶೀಲಿಸಿ.

(II) ಈ ಪ್ರಶ್ನೆ ಪತ್ರಿಕೆಯಲ್ಲಿ **13** ಪ್ರಶ್ನೆಗಳಿವೆ ಎಂಬುದನ್ನು ಗಮನಿಸಿ.

(III) ಪ್ರಶ್ನೆ ಪತ್ರಿಕೆಯ ಬಲಭಾಗದಲ್ಲಿ ಕೊಟ್ಟಿರುವ ಕೋಡ್ ಸಂಖ್ಯೆಯನ್ನು ಉತ್ತರ ಪತ್ರಿಕೆಯ ಮುಖ ಪುಟದಲ್ಲಿ ಅಭ್ಯರ್ಥಿಯು ಬರೆಯಬೇಕು.

(IV) **ಉತ್ತರಿಸುವುದಕ್ಕೆ ಮೊದಲು ಪ್ರಶ್ನೆಯ ಕ್ರಮ ಸಂಖ್ಯೆಯನ್ನು ಉತ್ತರ ಪತ್ರಿಕೆಯಲ್ಲಿ ಬರೆಯಿರಿ.**

(V) ಈ ಪ್ರಶ್ನೆ ಪತ್ರಿಕೆಯನ್ನು ಓದಿಕೊಳ್ಳಲು 15 ನಿಮಿಷಗಳನ್ನು ಕೊಡಲಾಗಿದೆ. ಪ್ರಶ್ನೆ ಪತ್ರಿಕೆಯನ್ನು 10.15 a.m. ಗೆ ವಿತರಿಸಲಾಗುವುದು. 10.15 a.m. ನಿಂದ 10.30 a.m. ರ ತನಕ ವಿದ್ಯಾರ್ಥಿಗಳು ಪ್ರಶ್ನೆ ಪತ್ರಿಕೆಯನ್ನು ಓದಿಕೊಳ್ಳಬೇಕು ಮತ್ತು ಈ ಅವಧಿಯಲ್ಲಿ ಯಾವುದೇ ಉತ್ತರವನ್ನು ಉತ್ತರ ಪತ್ರಿಕೆಯಲ್ಲಿ ಬರೆಯಬಾರದು.

**NOTE**

(I) Please check that this question paper contains **15** printed pages.

(II) Please check that this question paper contains **13** questions.

(III) Q.P. Code given on the right hand side of the question paper should be written on the title page of the answer-book by the candidate.

(IV) **Please write down the serial number of the question in the answer-book before attempting it.**

(V) 15 minute time has been allotted to read this question paper. The question paper will be distributed at 10.15 a.m. From 10.15 a.m. to 10.30 a.m., the candidates will read the question paper only and will not write any answer on the answer-book during this period.

# ಕನ್ನಡ

# KANNADA

*ಅನುಮತಿಸಲಾದ ಸಮಯ : **3** ಗಂಟೆ* — *ಗರಿಷ್ಠ ಅಂಕಗಳು : **80***

*Time allowed : **3** hours* — *Maximum Marks : **80***

General Instructions :

Read the following instructions carefully and follow :

1. This question paper is divided into **4** Sections.

   It has Total **13** questions.

2. **Section A :** _02_ Question No. **1** to **2**.

3. **Section B :** _02_ Question No. **3** to **4**.

4. **Section C :** _03_ Question No. **5** to **7**.

5. **Section D :** _06_ Question No. **8** to **13**.

   Attempt Questions as per specific instructions.

   Write Question No. in answer book before attempting it.

**ಸೂಚನೆಗಳು :**

**ಕೊಟ್ಟಿರುವ ಸೂಚನೆಗಳನ್ನು ಗಮನವಿಟ್ಟು ಓದಿರಿ :**

1. ಪ್ರಶ್ನೆ ಪತ್ರಿಕೆಯು **4** ವಿಭಾಗಗಳನ್ನು ಒಳಗೊಂಡಿದೆ.

   ಈ ಪ್ರಶ್ನೆ ಪತ್ರಿಕೆಯಲ್ಲಿ ಒಟ್ಟು **13** ಪ್ರಶ್ನೆಗಳಿವೆ.

2. **ವಿಭಾಗ -A :** _02_ ಪ್ರಶ್ನೆ ಸಂಖ್ಯೆ **1** to **2**.

3. **ವಿಭಾಗ -B :** _02_ ಪ್ರಶ್ನೆ ಸಂಖ್ಯೆ **3** to **4**.

4. **ವಿಭಾಗ -C :** _03_ ಪ್ರಶ್ನೆ ಸಂಖ್ಯೆ **5** to **7**.

5. **ವಿಭಾಗ -D :** _06_ ಪ್ರಶ್ನೆ ಸಂಖ್ಯೆ **8** to **13**.

   ನೀಡಿರುವ ನಿರ್ದಿಷ್ಟ ಸೂಚನೆಗಳಂತೆ ಪ್ರಶ್ನೆಗಳಿಗೆ ಉತ್ತರಿಸಿ.

   ಪ್ರಶ್ನೆಗಳಿಗೆ ಉತ್ತರಿಸುವ ಮೊದಲು ಪ್ರಶ್ನೆ ಸಂಖ್ಯೆಯನ್ನು ನಮೂದಿಸಿ.

## Section – A

**(ವಾಚನ ಮತ್ತು ಗ್ರಹಿಕಾ ಕೌಶಲ : 10 ಅಂಕಗಳು)**

**1.** ಕೆಳಗಿನ ಗದ್ಯ ಭಾಗವನ್ನು ಓದಿ, ಕೊಟ್ಟಿರುವ ಬಹು ಆಯ್ಕೆಯ ಪ್ರಶ್ನೆಗಳಿಗೆ ಉತ್ತರಿಸಿ. **5 × 1 = 5**

ನಮ್ಮ ರಾಷ್ಟ್ರಧ್ವಜಕ್ಕೆ ಒಂದು ಇತಿಹಾಸವಿದೆ. ರಾಷ್ಟ್ರಧ್ವಜವೆಂದರೆ ಅದು ಬರೀ ಬಟ್ಟೆಯ ತುಂಡಲ್ಲ ಅಥವಾ ಬಣ್ಣ ಬಣ್ಣಗಳ ಒಂದು ಕೋಲಾಜ್ ಅಲ್ಲ. ಇಡೀ ದೇಶದ ಘನತೆ, ಗೌರವ, ಹೆಮ್ಮೆ, ಅಸ್ಮಿತೆ ಆ ಧ್ವಜದ ರೂಪದಲ್ಲಿದೆ. ಧ್ವಜವೆಂದರೆ ದೇಶ, ದೇಶವೆಂದರೆ ಧ್ವಜ. ಧ್ವಜ ಆಯಾ ರಾಷ್ಟ್ರದ ಸಂಕೇತ. ನಾವು ದೇಶವನ್ನು ಭಾರತ ಮಾತೆಯೆಂದು ಕರೆಯುತ್ತೇವೆ. ದೇಶಕ್ಕೆ ನಾವು ತಾಯಿಯ ಗೌರವವನ್ನು ನೀಡಿದ್ದೇವೆ. ರಾಷ್ಟ್ರ ಧ್ವಜವೆಂದರೆ ಭಾರತ ಮಾತೆಯ ಹಣೆಯಲ್ಲಿ ರಾರಾಜಿಸುತ್ತಿರುವ ಕುಂಕುಮವಿದ್ದಂತೆ. ಈ ಕುಂಕುಮದ ಗೌರವವನ್ನು ನಾವು ಪ್ರಜ್ಞಾವಸ್ಥೆಯಲ್ಲಿ, ಅರೆಪ್ರಜ್ಞಾವಸ್ಥೆಯಲ್ಲಿ ಕಾಪಾಡಲೇಬೇಕು. ರಾಷ್ಟ್ರಧ್ವಜದೆದುರು ಯಾವುದೂ ಶ್ರೇಷ್ಠವಲ್ಲ. ಸ್ವತಃ ದೇವರು ಬಂದು 'ನಾನು ಶ್ರೇಷ್ಠನೋ ನಿನ್ನ ರಾಷ್ಟ್ರ ಧ್ವಜ ಶ್ರೇಷ್ಠವೋ' ಎಂದು ಕೇಳಿದರೆ, 'ನಮಗೆ ರಾಷ್ಟ್ರಧ್ವಜ ಎಲ್ಲರಿಗಿಂತಲೂ ಶ್ರೇಷ್ಠ ; ನಿನಗಿಂತಲೂ ಶ್ರೇಷ್ಠ' ಎಂದು ಹೇಳುವ ರಾಷ್ಟ್ರ ಪ್ರೇಮವನ್ನು ನಾವೆಲ್ಲರೂ ರೂಢಿಸಿಕೊಳ್ಳಬೇಕು.

ಭಾರತವು 56 ದೇಶಗಳಲ್ಲಿ (ರಾಜ್ಯ/ಸಾಮ್ರಾಜ್ಯಗಳಲ್ಲಿ) ಹರಿದು ಹಂಚಿ ಹೋಗಿದ್ದಾಗ ದೇಶದಲ್ಲಿ ಅಷ್ಟೇ ಪ್ರಮಾಣದಷ್ಟು ಅಥವಾ ಅದಕ್ಕಿಂತ ಹೆಚ್ಚು ರಾಷ್ಟ್ರ ಧ್ವಜಗಳಿದ್ದವು. ಪ್ರತಿಯೊಬ್ಬ ಸಂಸ್ಥಾನಿಕನೂ ತನ್ನದೇ ಆದ ಪ್ರತ್ಯೇಕ ಧ್ವಜವನ್ನು ಹೊಂದಿರುತ್ತಿದ್ದ. ಬ್ರಿಟಿಷರ ಕಾಲದಲ್ಲಿ ಬ್ರಿಟಿಷ್ ಧ್ವಜದ ಜೊತೆಗೆ ಆಯಾ ಸಂಸ್ಥಾನಿಕರ ಧ್ವಜಗಳು ರಾಷ್ಟ್ರಧ್ವಜವೆಂದು ಮೆರೆಯುತ್ತಿದ್ದವು. ಭಾರತದಲ್ಲಿ ಸ್ವಾತಂತ್ರ್ಯದ ಗಾಳಿ ಬೀಸಲಾರಂಭಿಸಿದಾಗ ಜನರಿಗೆ ತಮ್ಮ ಅರಿವಿನ ಬಗ್ಗೆ ಜಿಜ್ಞಾಸೆ ಮೂಡಲಾರಂಭಿಸಿತು. ಒಂದು ದೇಶ, ಆ ದೇಶಕ್ಕೆ ಒಂದು ಭಾಷೆ, ಒಂದು ಧ್ವಜ – ಹೀಗೆ ದೇಶಪ್ರೇಮದ ವಿಚಾರಗಳು ಜನರ ಮನದಲ್ಲಿ ಮೊಳಕೆಯೊಡೆಯಲಾರಂಭಿಸಿದವು. ಭಾರತದ ರಾಜಕೀಯ ನಕ್ಷೆಯ ಮೇಲೆ ಸ್ವಾತಂತ್ರ್ಯದ ಹಂಬಲದ ಗೆರೆಗಳು ಕಾಣಿಸಿಕೊಳ್ಳಲಾರಂಭಿಸಿದವು. ಸ್ವಾತಂತ್ರ್ಯವೆಂದರೆ ಸ್ವರಾಜ್ಯ ಅಥವಾ ಸುರಾಜ್ಯ ಎಂಬ ಕಲ್ಪನೆಗಳು ಜನರ ಮನಸ್ಸನ್ನು ಆಕ್ರಮಿಸಿಕೊಂಡವು. ಬ್ರಿಟಿಷ್ ದಾಸ್ಯದ ವಿರುದ್ಧವಾಗಿ ಚಳುವಳಿಗಳು ಬಲಗೊಂಡವು. ಈ ಚಳುವಳಿಯ ಹಿಂದಿನ ಶಕ್ತಿ ಅರ್ಥಾತ್ ಮಹಾತ್ಮಾ ಗಾಂಧೀಜಿಯವರಾಗಿದ್ದರು. ಆದರೆ ಧ್ವಜದ ಕಲ್ಪನೆ ಒಡಮೂಡಿದ್ದು 1857 ರ ಭಾರತದ ಮೊದಲ ಸ್ವಾತಂತ್ರ್ಯ ಸಂಗ್ರಾಮದ ನಂತರ. ಆಗ ಇಂಗ್ಲೆಂಡಿನ ಮಹಾರಾಣಿಯಾಗಿದ್ದ ವಿಕ್ಟೋರಿಯಾ, ಬ್ರಿಟಿಷ್

ಭಾರತಕ್ಕಾಗಿಯೇ ಒಂದು ಪ್ರತ್ಯೇಕವಾದ ಧ್ವಜವನ್ನು ರೂಪಿಸಿ ಅದನ್ನು ಬ್ರಿಟಿಷ್ ಭಾರತಾದ್ಯಂತ ಹಾರಿಸಬೇಕೆಂದು ಆಜ್ಞಾಪಿಸಿದಳು. ಈ ಧ್ವಜದ ಎಡ ಮೇಲ್ಭಾಗದಲ್ಲಿ ಯೂನಿಯನ್ ಜಾಕ್‌ದ ಚಿತ್ರವಿದ್ದು, ಬಲಗಡೆಗೆ ಒಂದು ನಕ್ಷತ್ರವನ್ನಿಟ್ಟು ಆ ನಕ್ಷತ್ರದ ತಲೆಮೇಲೆ ರಾಯಲ್ ಕಿರೀಟವನ್ನಿಡಲಾಗಿತ್ತು. ಈ ರೀತಿಯ ಸರ್ಕಾರಿ ಧ್ವಜವು 1947 ರವರೆಗೂ ಚಾಲ್ತಿಯಲ್ಲಿತ್ತೆಂದು ಹೇಳಿದರೆ ಎಲ್ಲರಿಗೂ ಅಚ್ಚರಿಯಾಗುವುದು ಸಹಜ ; ಆದರೆ ಅದು ವಸ್ತುಸ್ಥಿತಿ.

**ಪ್ರಶ್ನೆಗಳು.**

I. ಇಡೀ ದೇಶದ ಘನತೆ, ಗೌರವ, ಹೆಮ್ಮೆ, ಅಸ್ಮಿತೆ ಯಾವ ರೂಪದಲ್ಲಿದೆ ?

(A) ಬಟ್ಟೆಯ (B) ಧ್ವಜದ

(C) ಕುಂಕುಮದ (D) ತಾಯಿಯ

II. ಧ್ವಜ ಯಾವುದರ ಸಂಕೇತ ?

(A) ಇಡೀ ವಿಶ್ವದ (B) ದೇವರ

(C) ಬಟ್ಟೆಯ (D) ಆಯಾ ರಾಷ್ಟ್ರದ

III. ಸ್ವಾತಂತ್ರ್ಯ ಪೂರ್ವದಲ್ಲಿ ಭಾರತವು ಎಷ್ಟು ದೇಶಗಳಲ್ಲಿ (ರಾಜ್ಯ/ಸಾಮ್ರಾಜ್ಯಗಳಲ್ಲಿ) ಹರಿದು ಹಂಚಿ ಹೋಗಿತ್ತು ?

(A) 56 (B) 47

(C) 28 (D) 48

IV. ಸ್ವಾತಂತ್ರ್ಯದ ಬಗೆಗೆ ಜನರ ಮನಸ್ಸನ್ನು ಆಕ್ರಮಿಸಿಕೊಂಡ ಕಲ್ಪನೆಗಳಾವುವು ?

(A) ಸ್ವೇಚ್ಛಾಚಾರ ಎಂಬ ಕಲ್ಪನೆ

(B) ಸ್ವರಾಜ್ಯ ಅಥವಾ ಸುರಾಜ್ಯ ಎಂಬ ಕಲ್ಪನೆ

(C) ರಾಮರಾಜ್ಯ ಎಂಬ ಕಲ್ಪನೆ

(D) ಪರತಂತ್ರ ಎಂಬ ಕಲ್ಪನೆ

V. ಭಾರತೀಯರಿಗೆ ಧ್ವಜದ ಕಲ್ಪನೆ ಮೂಡಿದ್ದು ಯಾವಾಗ ?

(A) 1947 ರಲ್ಲಿ ಭಾರತ ಸ್ವಾತಂತ್ರವಾದಾಗ

(B) 1600 ರಲ್ಲಿ ಭಾರತದಲ್ಲಿ ಈಸ್ಟ್ ಇಂಡಿಯಾ ಸ್ಥಾಪನೆಯಾದಾಗ

(C) 1956 ರಲ್ಲಿ ಭಾಷಾವಾರು ಪ್ರಾಂತಗಳ ರಚನೆಯಾದಾಗ

(D) 1857 ರ ಭಾರತದ ಮೊದಲ ಸ್ವಾತಂತ್ರ್ಯ ಸಂಗ್ರಾಮದ ನಂತರ

**2.** ಕೆಳಗಿನ ಗದ್ಯಭಾಗವನ್ನು ಓದಿ, ಕೊಟ್ಟಿರುವ ಬಹುಆಯ್ಕೆಯ ಪ್ರಶ್ನೆಗಳಿಗೆ ಉತ್ತರಿಸಿ. **5 × 1 = 5**

ದೃಶ್ಯ ಕಲೆಗಳಲ್ಲಿ 'ಚಿತ್ರಕಲೆಗೆ ' ಹೆಚ್ಚಿನ ಪ್ರಾಶಸ್ತ್ಯ ಉಂಟು. ವರ್ಣ ವೈವಿಧ್ಯತೆಯಿಂದ ಕಂಗೊಳಿಸುವ ಕಲಾಕೃತಿಗಳು ಮನಸ್ಸಿಗೆ ಮುದ ನೀಡುತ್ತವೆ. ಚಿತ್ರಕಲೆಗಿರುವ ವಿಶೇಷ ಗುಣವೆಂದರೆ ಅವು ವಿಶ್ವಮಾನ್ಯವಾಗಿವೆ. ಸಾಹಿತ್ಯವನ್ನು ಆ ಭಾಷೆ ಬಲ್ಲವರು ಮಾತ್ರ ಓದಬಹುದು. ಆದರೆ ಚಿತ್ರಕಲೆಯನ್ನು ಎಲ್ಲರೂ ನೋಡಬಹುದು. ಇದು ವಿಶ್ವಭಾಷೆ, ವರ್ಣಗಳಿಂದ ಬರೆದುದು. ಕಲಾವಿದರು ಚಿತ್ರಿಸಿದ ಕಲಾಕೃತಿಗಳನ್ನು ಪ್ರದರ್ಶಿಸಲು ಒಂದು ಪ್ರಶಸ್ತ ಸ್ಥಳ ಬೇಕಲ್ಲ. ಈ ಕಟ್ಟಡವೇ ಕಲಾ ಗ್ಯಾಲರಿ. ಇದು ಆ ನಗರದ ಪ್ರತಿಷ್ಠೆಯ ಸ್ಥಾನ. ಉನ್ನತ ಅಭಿರುಚಿಯ ಪ್ರತೀಕ.

ಮುಂಬಯಿ ಏಷಿಯಾ ಖಂಡದ ಪ್ರಸಿದ್ಧ ವಾಣಿಜ್ಯ ಕೇಂದ್ರವೂ ಹೌದು, ಕಲಾ ಕೇಂದ್ರವೂ ಹೌದು. ಇಲ್ಲಿ ವರ್ಷದ 12 ತಿಂಗಳೂ ಕಲಾವಿದರಿಂದ ಕಲಾ ಪ್ರದರ್ಶನಗಳು ಜರುಗುತ್ತಲೇ ಇರುತ್ತವೆ. ಹಿರಿಯ ಕಲಾವಿದರು, ಕಿರಿಯ ಕಲಾವಿದರು, ಉದಯೋನ್ಮುಖ ಕಲಾವಿದರು, ಪ್ರತಿಭಾವಂತ ಕಲಾವಿದರು ಎಲ್ಲರೂ ಮುಂಬಯಿ ಕಲಾ ಗ್ಯಾಲರಿಗಳಲ್ಲಿ ತಮ್ಮ ಕಲಾ ಪ್ರದರ್ಶನ ಏರ್ಪಡಿಸಲು ಆತುರರಾಗಿರುತ್ತಾರೆ. ಇಲ್ಲಿ ಕಲಾವಿದರಿಗೆ ಗಮನಾರ್ಹ ಉತ್ತೇಜನ ದೊರೆಯುತ್ತದೆ. ಕಲಾಕೃತಿಗಳು ಮಾರಾಟಗೊಂಡು ಆರ್ಥಿಕ ಸಬಲತೆ ಪ್ರಾಪ್ತವಾಗುತ್ತದೆ. ಭಾರತದ ಕಲಾಕಾಶಿ ಎಂದೇ ಪ್ರಸಿದ್ಧವಾದ ಕೋಲಕತಾದಲ್ಲಿ ಅಕಾಡೆಮಿ ಆಫ್ ಫೈನ್ ಆರ್ಟ್ಸ್ ಬಹು ಪ್ರತಿಷ್ಠಿತ ಗ್ಯಾಲರಿಯಾಗಿದೆ. ಇಲ್ಲಿರುವ ಐದು ಗ್ಯಾಲರಿಗಳಲ್ಲಿ ನಾಮವಂತ ಕಲಾವಿದರ ಪ್ರದರ್ಶನಗಳು ವರ್ಷಂಪೂರ್ತಿ ನಡೆಯುತ್ತಲೇ ಇರುತ್ತವೆ. ಇದರ ಪಕ್ಕದಲ್ಲೇ ಇರುವ ರವೀಂದ್ರ ಭವನದಲ್ಲಿ ಚಿತ್ರಕಲಾ ಪ್ರದರ್ಶನಗಳು ಜತೆಗೆ ನಾಟಕ ಪ್ರದರ್ಶನಗಳೂ ಜರಗುತ್ತವೆ. ರವೀಂದ್ರ ಭವನದ ಎದುರು ಇರುವ ವಿಕ್ಟೋರಿಯಾ ಅರಮನೆ ಅಮೃತ ಶಿಲೆಯ ಬಹುದೊಡ್ಡ ಕಟ್ಟಡವಾಗಿದ್ದು, ಅಂತರ್‌ರಾಷ್ಟ್ರೀಯ ಚಿತ್ರಕಲಾ ಸಂಗ್ರಹಾಲಯವಾಗಿದೆ. ಪ್ರಪಂಚದ ಅತಿ ದೊಡ್ಡ ಕಲಾಕೃತಿಯೊಂದು ಇಲ್ಲಿ ಪ್ರದರ್ಶನಕ್ಕಿದೆ. ಜಯಪುರದ ರಾಜಬೀದಿಯಲ್ಲಿ ಹೊರಟ ಮೂರು ಭಾರಿ ದೊಡ್ಡ ಗಾತ್ರದ ಆನೆಗಳು, ಅಂಬಾರಿಯಲ್ಲಿ ಕುಳಿತ ರಾಜ, ಮೆರವಣಿಗೆ ನೋಡಲು ಕೂಡಿದ ಜನಸಂದಣಿ ಎಲ್ಲವನ್ನೂ ಈ ಭವ್ಯ ಕಲಾಕೃತಿಯಲ್ಲಿ ಬಹುರಮ್ಯವಾಗಿ ಚಿತ್ರಿಸಿದ ರಶಿಯನ್ ಕಲಾವಿದನ ಜಾಣ್ಮೆ ಪ್ರಶಂಸನಾರ್ಹ. ದೇಶಿ – ವಿದೇಶಿ ಕಲಾವಿದರ ನೂರಾರು ಕಲಾಕೃತಿಗಳು ಇಲ್ಲಿ ಪ್ರದರ್ಶಿತವಾಗಿವೆ. ಇವೆಲ್ಲ ಬಹು ಅಪರೂಪದ ಚಿತ್ರಗಳು.

ಪ್ಯಾರಿಸ್ಸಿನ 'ಲೂವ್ರ' ಕಲಾ ಗ್ಯಾಲರಿಯನ್ನು ನೆನಪಿಗೆ ತರುವ ಮಹಾರಾಷ್ಟ್ರದ ಔಂಧ ಗ್ರಾಮದಲ್ಲಿರುವ ಭವಾನಿ ಚಿತ್ರ ಸಂಗ್ರಹಾಲಯವು ಭಾರತದಲ್ಲಿಯೇ ಅತಿ ಹೆಚ್ಚು ಕಲಾಕೃತಿಗಳನ್ನು ಹೊಂದಿದ ವಿಶಾಲ ಸಂಗ್ರಹಾಲಯವಾಗಿದೆ. ಆಕರ್ಷಕ ಕಲ್ಲಿನ ಕಟ್ಟಡದಲ್ಲಿ ಅನೇಕ ವಿಶಾಲ ಗ್ಯಾಲರಿಗಳನ್ನು ಹೊಂದಿದ ಬೆಂಗಳೂರಿನ ಕರ್ನಾಟಕ ಚಿತ್ರಕಲಾ

ಪರಿಷತ್ ಹಾಗೂ ವೆಂಕಟಪ್ಪ ಆರ್ಟ್ ಗ್ಯಾಲರಿಗಳು ಕರ್ನಾಟಕದ ಹೆಮ್ಮೆಯ ಗ್ಯಾಲರಿಗಳು. ನವದೆಹಲಿಯಲ್ಲಿರುವ ಕೇಂದ್ರ ಸರ್ಕಾರದ ರವೀಂದ್ರ ಭವನವು ಅನೇಕ ಗ್ಯಾಲರಿಗಳನ್ನು ಹೊಂದಿದೆ. ಚಂಡೀಗಡ, ಚೆನ್ನೈನಲ್ಲಿ ಸರ್ಕಾರಿ ಕಲಾ ಗ್ಯಾಲರಿಗಳು ಜಗತ್ಪ್ರಸಿದ್ಧ ಕಲಾಕೃತಿಗಳ ಸಂಗ್ರಹವನ್ನು ಹೊಂದಿವೆ. ದೇಶದ ಇತರ ನಗರಗಳಲ್ಲೂ ಚಿತ್ರಕಲೆಗೆ ಹೆಚ್ಚಿನ ಉತ್ತೇಜನ ದೊರಕುತ್ತಿದ್ದು , ಇಲ್ಲಿಯೂ ಕಲಾ ಗ್ಯಾಲರಿಗಳಿವೆ.

**ಪ್ರಶ್ನೆಗಳು.**

I. ಚಿತ್ರಕಲೆಗಿರುವ ವಿಶೇಷ ಗುಣ ಯಾವುದು ?

(A) ಅವು ವಿಶ್ವಮಾನ್ಯವಾಗಿವೆ
(B) ಚಿತ್ರ ಕಲೆಗೆ ವಿಶೇಷ ಪ್ರಾಶಸ್ತ್ಯವಿದೆ
(C) ಮನಸ್ಸಿಗೆ ಮುದ ನೀಡುತ್ತವೆ
(D) ಚಿತ್ರ ಕಲೆಯನ್ನು ಎಲ್ಲರೂ ನೋಡಬಹುದು

II. ಏಷ್ಯಾ ಖಂಡದ ಪ್ರಸಿದ್ಧ ವಾಣಿಜ್ಯ ಕೇಂದ್ರ ಹಾಗೂ ಕಲಾ ಕೇಂದ್ರ ಯಾವುದು ?

(A) ಹೈದರಾಬಾದ್
(B) ಚೆನ್ನೈ
(C) ಮುಂಬಯಿ
(D) ಚಂಡೀಗಡ

III. ಭಾರತದ ಕಲಾಕಾಶಿ ಎಂದೇ ಪ್ರಸಿದ್ಧವಾದ ನಗರ ಯಾವುದು ?

(A) ಬನಾರಸ್
(B) ಕೋಲಕತಾ
(C) ದೆಹಲಿ
(D) ಅಮೃತಸರ್

IV. ಭಾರತದಲ್ಲಿಯೇ ಅತಿ ಹೆಚ್ಚು ಕಲಾಕೃತಿಗಳನ್ನು ಹೊಂದಿದ ವಿಶಾಲ ಚಿತ್ರ ಸಂಗ್ರಹಾಲಯ ಯಾವುದು ?

(A) ಮಹಾರಾಷ್ಟ್ರದ ಔಂಧ ಗ್ರಾಮದಲ್ಲಿರುವ ಭವಾನಿ ಚಿತ್ರ ಸಂಗ್ರಹಾಲಯ
(B) ಬೆಂಗಳೂರಿನ ವೆಂಕಟಪ್ಪ ಆರ್ಟ್ ಗ್ಯಾಲರಿ
(C) ಕೋಲಕತಾದ ಅಕಾಡೆಮಿ ಆಫ್ ಫೈನ್ ಆರ್ಟ್ಸ್
(D) ನವದೆಹಲಿಯಲ್ಲಿರುವ ರವೀಂದ್ರ ಕಲಾ ಭವನ

V. ಕರ್ನಾಟಕದ ಹೆಮ್ಮೆಯ ಕಲಾ ಗ್ಯಾಲರಿಗಳಲ್ಲಿ ಇದು ಒಂದು.

(A) ಲೂವ್ರ ಕಲಾ ಗ್ಯಾಲರಿ
(B) ವೆಂಕಟಪ್ಪ ಆರ್ಟ್ ಗ್ಯಾಲರಿ
(C) ರವೀಂದ್ರ ಕಲಾ ಭವನ
(D) ವಿಕ್ಟೋರಿಯಾ ಕಲಾ ಗ್ಯಾಲರಿ

## Section – B

### (ಅನ್ವಯಿಕ ವ್ಯಾಕರಣ : 16 ಅಂಕಗಳು)

**3.** ಕೆಳಗೆ ವ್ಯಾಕರಣಾಂಶಗಳ ಬಹು ಆಯ್ಕೆಯ **10** ಪ್ರಶ್ನೆಗಳಿವೆ. ಎಲ್ಲ ಪ್ರಶ್ನೆಗಳಿಗೆ ಉತ್ತರಿಸಿ. **10 × 1 = 10**

I. ಕೆಳಗಿನ ಪದದ ಸಂಧಿ ಹೆಸರಿಸಿ.

ಗಂಡರೈವರು

(A) ಆಗಮಸಂಧಿ (B) ಸವರ್ಣದೀರ್ಘಸಂಧಿ

(C) ಲೋಪಸಂಧಿ (D) ವೃದ್ಧಿಸಂಧಿ

II. ಕೆಳಗಿನ ಪದದ ಸಮಾಸ ಹೆಸರಿಸಿ.

ಕೈಮುಗಿದು

(A) ಕ್ರಿಯಾ ಸಮಾಸ (B) ದ್ವಂದ್ವ ಸಮಾಸ

(C) ತತ್ಪುರುಷ ಸಮಾಸ (D) ಬಹುವ್ರೀಹಿ ಸಮಾಸ

III. ಕೆಳಗಿನ ಪದದ ಗ್ರಾಂಥಿಕ ರೂಪ ಬರೆಯಿರಿ.

ಮರುಗ್ಯಾಳ

(A) ಮರುಳಿನ ದಿಬ್ಬ (B) ಮರುಳಾಗುವಳು

(C) ಮರಗುವಳು (D) ಸೊರಗುವಳು

IV. ಕೆಳಗಿನ ವಾಕ್ಯವನ್ನು ಭವಿಷತ್ ಕಾಲಕ್ಕೆ ಪರಿವರ್ತಿಸಿ.

ಹಿರಿಯರು ಯಾವಾಗಲೂ ಒಳ್ಳೆಯದನ್ನೇ ಬಯಸುತ್ತಾರೆ

(A) ಹಿರಿಯರು ಯಾವಾಗಲೂ ಒಳ್ಳೆಯದನ್ನೇ ಬಯಸುವರು

(B) ಹಿರಿಯರು ಯಾವಾಗಲೂ ಒಳ್ಳೆಯದನ್ನೇ ಬಯಸುವುದಿಲ್ಲ

(C) ಹಿರಿಯರು ಯಾವಾಗಲೂ ಒಳ್ಳೆಯದನ್ನೇ ಬಯಸಿದರು

(D) ಹಿರಿಯರು ಯಾವಾಗಲೂ ಒಳ್ಳೆಯದನ್ನೇ ಬಯಸರು

V. ಕೆಳಗಿನ ವಾಕ್ಯದಲ್ಲಿರುವ ಕ್ರಿಯಾಪದದ ಧಾತುವನ್ನು ತಿಳಿಸಿ.

ಪ್ರಜೆಗಳು ಪ್ರತಿನಿಧಿಗಳನ್ನು ಆರಿಸುತ್ತಾರೆ

(A) ಪ್ರಜೆಗಳು (B) ಆರಿಸುತ್ತಾರೆ

(C) ಪ್ರತಿನಿಧಿ (D) ಆರಿಸು

VI. ಕೆಳಗಿನ ಪದ ಬಿಡಿಸಿ ಬರೆಯಿರಿ.

ತನ್ನೊಡಲನಿಕ್ಕುವನು

(A) ತನ್ನೊಡಲನು + ಇಕ್ಕುವನು (B) ತನ್ನೊಡಲ + ನಿಕ್ಕುವನು

(C) ತನ್ನೊಡಲನ್ನು + ಇಕ್ಕುವನು (D) ತನ್ನೊಡಲ + ನೆಕ್ಕುವನು

VII. ಕೆಳಗಿನ ಪದದಲ್ಲಿರುವ ವಿಭಕ್ತಿಯನ್ನು ತಿಳಿಸಿ.

ಪುಸ್ತಕವು

(A) ಷಷ್ಠಿ (B) ಸಪ್ತಮಿ

(C) ಪ್ರಥಮಾ (D) ದ್ವಿತೀಯಾ

VIII. ಕೆಳಗಿನ ಪದದ ತತ್ಸಮ – ತದ್ಭವ ರೂಪ ಬರೆಯಿರಿ.

ಗರ

(A) ಗೃಹ (B) ಗ್ರಹ

(C) ಪಿಶಾಚಿ (D) ನಿಕೇತನ

IX. ಕೆಳಗಿನ ಪದದ ಸಮಾನಾರ್ಥಕ ಪದಗಳನ್ನು ಬರೆಯಿರಿ.

ಮೊರೆ

(A) ಮುಖ, ಮೊಗ (B) ಪ್ರಾರ್ಥನೆ, ಕೋರಿಕೆ

(C) ವದನ, ನಯನ (D) ಮರೆ, ಮುಚ್ಚು

X. ಕೆಳಗಿನ ಪದದ ಅನೇಕಾರ್ಥಗಳನ್ನು ಬರೆಯಿರಿ.

ತೊರೆ

(A) ತೊಗರೆ – ತೊಗಟೆ (B) ಹಳ್ಳ – ಕೊಳ್ಳ

(C) ತ್ಯಜಿಸು – ಹಳ್ಳ (D) ಕಾಣು – ನೋಟ

4. ಕೆಳಗಿನ ಪ್ರಶ್ನೆಗಳಿಗೆ ಕೊಟ್ಟಿರುವ ಸೂಚನೆಯಂತೆ ಉತ್ತರಿಸಿ.

I. ಕೆಳಗಿನ ಪದ್ಯ ಭಾಗಕ್ಕೆ ಪ್ರಸ್ತಾರ ಹಾಕಿ, ಗಣ ವಿಂಗಡಿಸಿ ಛಂದಸ್ಸನ್ನು ಹೆಸರಿಸಿ. **2**

ರಾಮನಿನಗಲ್ಚಿತಂದಾ

ನೀ ಮಾನಿನಿಗಿನಿತು ದುಃಖಮಂ ಪುಟ್ಟಿಸಿದೆಂ ।

II. ಕೆಳಗಿನ ಯಾವುದಾದರೊಂದು ಗಾದೆ ಮಾತನ್ನು ವಿಸ್ತರಿಸಿ ಬರೆಯಿರಿ. **2 × 1 = 2**

(i) ಶಕ್ತಿಗಿಂತ ಯುಕ್ತಿ ಮೇಲು

(ii) ಚಿಂತೆಯೇ ಮುಪ್ಪು, ಸಂತೋಷವೇ ಯೌವನ

III. ಕೆಳಗಿನ ವಾಕ್ಯವನ್ನು ಕರ್ಮಣಿ ವಾಕ್ಯವನ್ನಾಗಿ ಬದಲಿಸಿ. **1**

ಭೀಮಸೇನನು ಶತ್ರುಗಳನ್ನು ಕೊಂದನು

IV. ಕೆಳಗಿನ ವಾಕ್ಯವನ್ನು ನಿಷೇಧಾರ್ಥಕ ವಾಕ್ಯವನ್ನಾಗಿ ಪರಿವರ್ತಿಸಿ. **1**

ಕೆಲವು ಆನೆಗಳು ಹುಲಿಗೆ ಹೆದರುವವು

## Section – C

**(ವಾಚನ ಮತ್ತು ಗ್ರಹಿಕಾ ಕೌಶಲ : 14 ಅಂಕಗಳು)**

5. ಕೆಳಗಿನ ಪದ್ಯವನ್ನು ಓದಿ, ಕೊಟ್ಟಿರುವ ಬಹು ಆಯ್ಕೆಯ ಪ್ರಶ್ನೆಗಳಿಗೆ ಉತ್ತರಿಸಿ. **5 × 1 = 5**

ಜಾಲಿಯ ಮರದಂತೆ ಧರೆಯೊಳು ದುರ್ಜನರು
ಮೂಲಾಗ್ರ ಪರಿಯಂತೆ ಮುಳ್ಳು ಕೂಡಿಪ್ಪಂತೆ ।

ಬಿಸಿಲಲ್ಲಿ ಬಳಲಿ ಬಂದವರಿಗೆ ನೆರಳಿಲ್ಲ
ಹಸಿದು ಬಂದವರಿಗೆ ಹಣ್ಣು ಇಲ್ಲ
ಕುಸುಮ ವಾಸನೆಯಿಲ್ಲ ಕೂಡಲು ಸ್ಥಳವಿಲ್ಲ
ರಸದಲ್ಲಿ ಸ್ವಾದವು ವಿಷದಂತೆ ಇರುತಿಹ ।

ಊರ ಹಂದಿಗೆ ಷಡ್ರಸಾನ್ನವನಿಕ್ಕಲು
ನಾರುವ ದುರ್ಗಂಧ ಬಿಡಬಲ್ಲುದೆ
ಘೋರ ಪಾಪಿಗೆ ತತ್ವಜ್ಞಾನವ ಪೇಳಲು
ಕ್ರೂರ ಕರ್ಮವ ಬಿಟ್ಟು ಸುಜನನಾಗುವನೆ ।

ತನ್ನಿಂದ ಉಪಕಾರ ತೊಟಕಾದರು ಇಲ್ಲ
ಬಿನ್ನಾಣದ ಮಾತಿಗೆ ಕೊನೆಯಿಲ್ಲ
ಅನ್ನಕ್ಕೆ ಸೇರಿದ ಕುನ್ನಿ ಮಾನವರಂತೆ
ಇನ್ನಿವರ ಕಾರ್ಯವು ಪುರಂದರವಿಠಲ ॥

ಪ್ರಶ್ನೆಗಳು

I. ಜಾಲಿಯ ಮರದಂತೆ ಇರುವವರು ಯಾರು ?

(A) ಸಜ್ಜನರು (B) ದುರ್ಜನರು
(C) ಶರಣರು (D) ದಾಸರು

II. ದುರ್ಗಂಧ ಬಿಡದಿರುವುದು ಯಾವುದು ?

(A) ಜಾಲಿಯ ಮರ (B) ಘೋರ ಪಾಪಿ
(C) ಊರ ಹಂದಿ (D) ಕುನ್ನಿ ಮಾನವರು

III. ಯಾರಿಗೆ ನೆರಳು ಸಿಗುವುದಿಲ್ಲ ?

(A) ಹಸಿದು ಬಂದವರಿಗೆ (B) ಬಿಸಿಲಲ್ಲಿ ಬಳಲಿ ಬಂದವರಿಗೆ
(C) ನೀರಡಿಸಿ ಬಂದವರಿಗೆ (D) ಬಾಯಾರಿಕೆ ಆದವರಿಗೆ

IV. ಯಾವ ಮಾತಿಗೆ ಕೊನೆಯಿಲ್ಲ ?

(A) ಹೊಗಳಿಕೆಯ (B) ತೆಗಳಿಕೆಯ
(C) ಬಿನ್ನಾಣದ (D) ಅಸತ್ಯದ

V. ಜಾಲಿಯ ಮರದ ರಸಸ್ವಾದ ಹೇಗಿರುತ್ತದೆ ?

(A) ಸಿಹಿ (B) ಒಗರು
(C) ಹುಳಿ (D) ವಿಷದಂತೆ

6. ಕೆಳಗಿನ ಗದ್ಯ ಭಾಗವನ್ನು ಓದಿ, ಕೊಟ್ಟಿರುವ ಬಹುಆಯ್ಕೆಯ ಪ್ರಶ್ನೆಗಳಿಗೆ ಉತ್ತರಿಸಿ. **5 × 1 = 5**

ಅದೃಷ್ಟ ಎಂದರೇನು ? ಅತಿ ಕಡಿಮೆ ಸಂಭವನೀಯತೆ ಇರುವ ಘಟನೆ ನಡೆದಾಗ, ಅದು ಒಳ್ಳೆಯದಿದ್ದರೆ ಅದನ್ನು ಅದೃಷ್ಟ ಎನ್ನುತ್ತೇವೆ. ಕೆಟ್ಟದ್ದಾಗಿದ್ದರೆ ಅದು ದುರದೃಷ್ಟ. ಬದುಕಿನಲ್ಲಿ ಅಪರೂಪಕ್ಕೆ ಇಂತಹ ಅದೃಷ್ಟ – ದುರದೃಷ್ಟದ ಘಟನೆಗಳು ಘಟಿಸುತ್ತವೆ. ಆದರೆ ಅದೃಷ್ಟವನ್ನೇ ಅವಲಂಬಿಸಿ ಬದುಕಲು ಹೊರಟವರು ಜೂಜುಕೋರರಾಗುತ್ತಾರೆ.

ಬದುಕು ಸದಾ ಅದೃಷ್ಟಗಳನ್ನು ನಮ್ಮತ್ತ ಎಸೆಯದಿದ್ದರೂ, ನೂರಾರು ಅವಕಾಶಗಳನ್ನು ನಮ್ಮೆದುರು ತೆರೆದಿಡುತ್ತದೆ. ಎಂಥ ಕೆಟ್ಟ ಸಂದರ್ಭದಲ್ಲೂ ನಮ್ಮೆದುರು ಆಯ್ಕೆಗಳಿರುತ್ತವೆ. ಕೇವಲ ಹತ್ತನೇ ತರಗತಿ ಓದಿದ್ದ, ದಿನಾಲು ಗಂಡನಿಂದ ಏಟು ತಿನ್ನುತ್ತಿದ್ದ, ಮೂರು ಸಣ್ಣ ಮಕ್ಕಳ ತಾಯಿ ಫ್ಲೇವಿಯಾ "ತಾನು ಓದಿಲ್ಲ, ತವರಿನ ಸಂಪತ್ತಿಲ್ಲ, ಬೆಂಬಲಕ್ಕೆ ಯಾರಿಲ್ಲ, ಮೂರು ಮಕ್ಕಳು, ಬಡಿಸಿಕೊಳ್ಳದೆ ಬೇರೆ ಮಾರ್ಗವಿಲ್ಲ" ಎಂದು ಕೈಕಟ್ಟಿ ದುರದೃಷ್ಟಕ್ಕೆ ಹಲುಬಿ ಕೂರಲಿಲ್ಲ. ಅವರೆದುರು ಆಯ್ಕೆಗಳಿದ್ದವು. ಅಂತಹ ಕೆಟ್ಟ ಸಂದರ್ಭದಲ್ಲೂ ನಲವತ್ತರ ವಯಸ್ಸಿನಲ್ಲಿ ವಿದ್ಯಾಭ್ಯಾಸ ಮುಂದುವರಿಸಿ ಮುಂಬಯಿಯ ಪ್ರಸಿದ್ಧ ನ್ಯಾಯವಾದಿಯಾದರು. ಮೂರು ಮಕ್ಕಳನ್ನು ಮುಂದೆ ತಂದರು. "ವರದಕ್ಷಿಣೆ ಕೊಡದೆ ಮದುವೆಗೆ ಬೇರೆ ಮಾರ್ಗವಿಲ್ಲ" ಎಂದುಕೊಂಡ ನಿಶಾಶರ್ಮ, ಹಸೆಯೇರುವ ಸಮಯದಲ್ಲಾದರೂ ತನಗೆ ದುರಾಸೆಯ ಈ ಹುಡುಗನನ್ನು ನಿರಾಕರಿಸುವ ಆಯ್ಕೆ ಇದೆ ಎಂದು ಕಂಡುಕೊಂಡಳು.

ಬದುಕು ನಮ್ಮೆದುರು ನೂರು ದಾರಿಗಳನ್ನು ತೆರೆದಿದೆ. ನಮ್ಮಂಥ ಬಹುಪಾಲು ಮಧ್ಯಮ ವರ್ಗದವರ ಎದುರು ನೂರು – ಸಾವಿರ ಆಯ್ಕೆಗಳಿವೆ. ಓದುವ ಆಯ್ಕೆ, ಜರ್ದಾ ಜಗಿಯದೆ ಇರುವ ಆಯ್ಕೆ, ಫ್ಲೇವಿನ್ ಚಟಕ್ಕೆ ಬೀಳದ ಆಯ್ಕೆ, ವರದಕ್ಷಿಣೆ ಇಲ್ಲದೆ ಮದುವೆಯಾಗುವ ಆಯ್ಕೆ, ಅಂತಹ ಪುಣ್ಯಾತ್ಮ ಸಿಗದಿದ್ದರೆ ಮದುವೆ ಆಗದೆ ಇರುವ ಆಯ್ಕೆ – ಬದುಕು ನಮ್ಮೆದುರು ನೂರು ಅವಕಾಶಗಳನ್ನು ಇಟ್ಟಿದೆ. ಬಳಸಿಕೊಳ್ಳಬೇಕಷ್ಟೆ. ನೂರು ಹಾದಿಯನ್ನು ಹಾಸಿದೆ. ಎದ್ದು ನಡೆಯಬೇಕಷ್ಟೆ.

ಪ್ರಶ್ನೆಗಳು.

I. ಬದುಕು ನಮ್ಮೆದುರು ಏನನ್ನು ತೆರೆದಿಡುತ್ತದೆ ?

(A) ಸಂತೋಷವನ್ನು (B) ದುಃಖವನ್ನು

(C) ಅವಕಾಶಗಳನ್ನು (D) ಗುರಿಯನ್ನು

II. ಎಂಥ ಕೆಟ್ಟ ಸಂದರ್ಭದಲ್ಲೂ ನಮ್ಮೆದುರು ಏನಿರುತ್ತವೆ ?

(A) ಉಪಾಯಗಳು (B) ಆಯ್ಕೆಗಳು

(C) ಉತ್ತರಗಳು (D) ಅಪಾಯಗಳು

III. ಫ್ಲೇವಿಯಾ ಯಾವುದಕ್ಕೆ ಹಲುಬಿ ಕೂರಲಿಲ್ಲ ?

(A) ನೌಕರಿಗಾಗಿ (B) ಮಕ್ಕಳಿಗಾಗಿ

(C) ಅದೃಷ್ಟಕ್ಕೆ (D) ದುರದೃಷ್ಟಕ್ಕೆ

IV. ನಿಶಾಶರ್ಮ ಯಾವುದನ್ನು ಆಯ್ಕೆ ಮಾಡಿಕೊಂಡರು ?

(A) ವರದಕ್ಷಿಣೆ ನೀಡಿ ಮದುವೆಯಾಗುವ (B) ಸ್ತ್ರೀ ಸಂಘವನ್ನು ಸ್ಥಾಪಿಸುವ

(C) ದುರಾಸೆಯ ಹುಡುಗನನ್ನು ನಿರಾಕರಿಸುವ (D) ಸರ್ಕಾರಿ ಉದ್ಯೋಗ ಮಾಡುವ

V. ಬದುಕಿನ ಹಾದಿಯಲ್ಲಿ ನಾವು ಏನು ಮಾಡಬೇಕು ?

(A) ಅದೃಷ್ಟವನ್ನು ನಂಬಬೇಕು (B) ದುರದೃಷ್ಟವನ್ನು ಸ್ವೀಕರಿಸಬೇಕು

(C) ಎದ್ದು ನಡೆಯಬೇಕು (D) ಸೋತು ಶರಣಾಗಬೇಕು

7. ಕೆಳಗಿನ ಗದ್ಯಭಾಗವನ್ನು ಓದಿ, ಕೊಟ್ಟಿರುವ ಬಹುಆಯ್ಕೆಯ ಪ್ರಶ್ನೆಗಳಿಗೆ ಉತ್ತರಿಸಿ. **4 × 1 = 4**

ಕೃಷ್ಣೇಗೌಡರ ಆನೆ ಕಾಡಿನಿಂದ ಹಿಡಿದು ತಂದು ಪಳಗಿಸಿದ ಆನೆಯಲ್ಲ. ಘಟ್ಟದ ಕೆಳಗಿದ್ದ ಗೂಳೂರು ಮಠದ ಆನೆ ಹಾಕಿದ ಮರಿಯೇ ಕೃಷ್ಣೇಗೌಡರ ಬಳಿ ಇದ್ದ ಆನೆ. ಇದು ಹುಟ್ಟಿದ್ದು, ಬೆಳೆದಿದ್ದು ಎಲ್ಲ ಊರಿನಲ್ಲಿ, ಜನಗಳ ನಡುವೆಯೇ. ಹಾಗಾಗಿ ಅದಕ್ಕೆ ಕಾಡಿನ ಬಗ್ಗೆಯಾಗಲಿ ಕಾಡಿನಲ್ಲಿರುವ ಇತರ ಕಾಡಾನೆಗಳ ಬಗ್ಗೆಯಾಗಲಿ ಏನೂ ತಿಳುವಳಿಕೆ ಇರಲಿಲ್ಲವೆಂದು ಕಾಣುತ್ತದೆ. ಅದು ಮೂಡಿಗೆರೆಯ ಪೇಟೆಗೆ ಎಷ್ಟೊಂದು ಒಗ್ಗಿತ್ತೆಂದರೆ ಯಾವ ಲಂಗುಲಗಾಮಿಲ್ಲದೆ ದನಕರುಗಳ ರೀತಿಯಲ್ಲಿ ಪೇಟೆಯೊಳಗೆ ತಿರುಗಿಕೊಂಡಿರುತ್ತಿತ್ತು, ಸ್ಕೂಲು ಮಕ್ಕಳು ಅದರ ಹತ್ತಿರ ಬರಲು ಹೆದರುತ್ತಿದ್ದವಾದರೂ ಅವರು ದೂರದಿಂದಲೇ ಗೌರಿ ಎಂದು ಕೂಗಿದರೆ ಸಾಕು ಸೊಂಡಿಲೆತ್ತಿ ಸಲಾಮ್ ಮಾಡುತ್ತಿತ್ತು. ದಾರಿ ಬದಿಯ ಪೆಟ್ಟಿಗೆ ಅಂಗಡಿಗಳವರು ಹಣ್ಣು ಖರ್ಚಾದ ಬಾಳೆ ಗೊನೆಗಳ ದಿಂಡು, ಸಿಪ್ಪೆಗಳನ್ನು, ಜಜ್ಜಿದ, ಹಾಳಾದ ಹಣ್ಣುಗಳನ್ನೂ ಅದಕ್ಕೆ ಕೊಡಲು ಇಟ್ಟಿರುತ್ತಿದ್ದರು. ಈ ಆನೆ ಖಾಯಮ್ಮಾಗಿ ಎಲ್ಲಾ ಪೆಟ್ಟಿಗೆ ಅಂಗಡಿಗಳ ಬಳಿಗೂ ಹೋಗಿ ಅವನ್ನೆಲ್ಲಾ ಸೊಂಡಿಲಲ್ಲಿ ತಗೊಂಡು ತಿನ್ನುತ್ತಿತ್ತು.

ಮಠದ ಜಗದ್ಗುರುಗಳನ್ನು ಜನರು ಅಡ್ಡಪಲ್ಲಕ್ಕಿಯಲ್ಲಿ ತಮ್ಮ ಹೆಗಲ ಮೇಲೆ ಹೊರತೊಡಗಿದ್ದರಿಂದ ಆನೆಗೆ ಜಗದ್ಗುರುಗಳನ್ನು ಹೊರುವ ಕೆಲಸ ತಪ್ಪಿಹೋಯ್ತು. ಹೀಗಾಗಿ ನಿರುಪಯುಕ್ತವೆನ್ನಿಸಿದ ಈ ಆನೆಯನ್ನು, ಅದಕ್ಕಿಂತ ಮುಖ್ಯವಾಗಿ ಅದರ ಮಾವುತನನ್ನೂ ಹೊರ ಹಾಕಿ ಕೈ ತೊಳೆದುಕೊಳ್ಳಲು ಮಠದವರು ಹವಣಿಸುತ್ತಿದ್ದರು. ಅದರ ಮಾವುತ ವೇಲಾಯುಧನನ್ನು ಸಾಕುವುದು ಆ ಆನೆಯನ್ನು ಸಾಕುವುದಕ್ಕಿಂತ ಹೆಚ್ಚು ತ್ರಾಸದಾಯಕವಾಗಿತ್ತು ಮಠದವರಿಗೆ. ಇಪ್ಪತ್ತನಾಲ್ಕು ಗಂಟೆಯೂ ಕುಡಿದೇ ಇರುತ್ತಿದ್ದ ಈ ಮಾವುತ ಮಠದ ಸಾತ್ವಿಕ ವಾತಾವರಣಕ್ಕೆ ದೊಡ್ಡ ತಲೆ ನೋವಾಗಿದ್ದ. ದುರ್ನಡತೆಗಾಗಿ ಅವನಿಗೆ ಛೀಮಾರಿ ಹಾಕಿ ಒಮ್ಮೆ ಓಡಿಸಿದಾಗ ಆನೆ ಅನೇಕ ದಿನಗಳವರೆಗೆ ಯಾರ ಮಾತನ್ನು ಕೇಳದೆ ಊಟವನ್ನೇ ವರ್ಜಿಸಿತ್ತು. ಕೊನೆಗೆ ಆನೆಯ ಸಲುವಾಗಿ ವೇಲಾಯುಧನನ್ನು ಹುಡುಕಿಕೊಂಡು ಕೇರಳದವರೆಗೂ ಹೋಗಿ ಕರೆತಂದರು. ಆನೆ ಇರುವವರೆಗೆ ತನ್ನ ಅನಿವಾರ್ಯತೆಯನ್ನು ಅರಿತ ಅವನು ಮಠಕ್ಕೆ ಇನ್ನಷ್ಟು ಕಿರುಕುಳ ಕೊಡಲಾರಂಭಿಸಿದ್ದ. ಇದೆಲ್ಲ ಬಹಳ ಹಿಂದಿನ ಕತೆ. ಆನೆ ಮೂಡಿಗೆರೆಗೆ ಬರುವುದಕ್ಕೆ ಬಹಳ ಹಿಂದೆ ನಡೆದದ್ದು.

ಪ್ರಶ್ನೆಗಳು.

I. ಕೃಷ್ಣೇಗೌಡರ ಆನೆ ಹುಟ್ಟಿ ಬೆಳೆದಿದ್ದು ಎಲ್ಲಿ ?

(A) ಮಠದಲ್ಲಿ (B) ಕಾಡಿನಲ್ಲಿ

(C) ಊರಿನಲ್ಲಿ, ಜನಗಳ ನಡುವೆ (D) ಪಶು ಚಿಕಿತ್ಸಾಲಯದಲ್ಲಿ

II. ಕೃಷ್ಣೇಗೌಡರ ಆನೆ ಮೊದಲು ಯಾವ ಮಠದಲ್ಲಿತ್ತು ?

(A) ಗೂಳೂರು ಮಠ (B) ಮೂರು ಸಾವಿರ ಮಠ

(C) ಸಿದ್ದಗಂಗಾ ಮಠ (D) ರಾಮಕೃಷ್ಣಾಶ್ರಮ

III. ಆನೆಗೆ ಯಾವ ತಿಳುವಳಿಕೆ ಇರಲಿಲ್ಲ ?

(A) ಜನರ ಬಗ್ಗೆ (B) ಕಾಡಿನ ಬಗ್ಗೆ ಮತ್ತು ಕಾಡಾನೆಗಳ ಬಗ್ಗೆ

(C) ಊರುಗಳ ಬಗ್ಗೆ (D) ಮಕ್ಕಳ ಬಗ್ಗೆ

IV. ಆನೆಗೆ ಜಗದ್ಗುರುಗಳನ್ನು ಹೊರುವ ಕೆಲಸ ತಪ್ಪಿಹೋದುದೇಕೆ ?

(A) ಆನೆ ಮರಿಗೆ ಜನ್ಮ ನೀಡಿದ್ದರಿಂದ

(B) ಜಗದ್ಗುರುಗಳನ್ನು ಅಡ್ಡಪಲ್ಲಕ್ಕಿಯ ಮೇಲೆ ಜನರು ತಮ್ಮ ಹೆಗಲ ಮೇಲೆ ಹೊರತೊಡಗಿದ್ದರಿಂದ

(C) ಕೃಷ್ಣೇಗೌಡರು ಆನೆಯನ್ನು ಕೊಂಡು ತಂದಿದ್ದರಿಂದ

(D) ಮಾವುತ ವೇಲಾಯುಧನ ದುರ್ನಡತೆಯಿಂದ

## Section – D

**(ಪದ್ಯಗಳ ಅಧ್ಯಯನ, ಕವಿ ಪರಿಚಯ ಮತ್ತು ಸೃಜನಾತ್ಮಕ ಬರವಣಿಗೆ : 40 ಅಂಕಗಳು)**

8. ಕೆಳಗಿನ ಪ್ರಶ್ನೆಗಳಿಗೆ ಎರಡು–ಮೂರು ವಾಕ್ಯಗಳಲ್ಲಿ ಉತ್ತರಿಸಿ. **3 × 2 = 6**

   I. ಕಲಾಂ ಅವರ ಬದುಕಿನ ಮಂತ್ರ ಯಾವುದು ?

   II. ಗಂಡರ್ಥೈವರು ಮೂರು ಲೋಕದ ಗಂಡರಾರು ? ಹೆಸರಿಸಿ.

   III. ಆನೆ ಸಾಕುವುದರ ಬಗ್ಗೆ ಜನರ ನಂಬಿಕೆ ಏನಾಗಿತ್ತು ?

9. ಕೆಳಗಿನವುಗಳಿಗೆ ಸಂದರ್ಭ ಸೂಚಿಸಿ, ಸ್ವಾರಸ್ಯ ಬರೆಯಿರಿ. **3 × 3 = 9**

   I. ಇಂಗ್ಲಿಷ್ – ಹಿಂದಿ ಬಾರದವರು ವಿಮಾನ ಪ್ರಯಾಣ ಮಾಡಬಾರದೆ ?

   II. ದೀನ ದಲಿತತನಕ್ಕೆ ಧಿಕ್ಕಾರವಿರಲಿ

   **ಅಥವಾ (or)**

   ಹಿತ್ತಾಳೆಗಿಂತ ಬಲುಹೀನ

   III. ಹೊರಗಡೆಯಿಂದ ಎಕ್ಸ್‌ಪೋರ್ಟ್ ಆದವು

10. ಕೆಳಗಿನ ಕವಿ / ಲೇಖಕರಲ್ಲಿ ಯಾರಾದರೂ ಒಬ್ಬರ ಬಗ್ಗೆ ಆರೇಳು ವಾಕ್ಯಗಳಲ್ಲಿ ಬರೆಯಿರಿ. **1 × 3 = 3**

    I. ಪುಲಿಗೆರೆ ಸೋಮನಾಥ   II. ಹಾ.ಮಾ. ನಾಯಕ   III. ದ.ರಾ. ಬೇಂದ್ರೆ

11. ಕೆಳಗಿನ ಪ್ರಶ್ನೆಗಳಿಗೆ ಎಂಟು–ಹತ್ತು ವಾಕ್ಯಗಳಲ್ಲಿ ಉತ್ತರಿಸಿ. **3 × 4 = 12**

    I. ಧಣಿ ಹಾಗೂ ಹೊಳೆಯ ನಡುವಿನ ಸಮರವನ್ನು ಚಿತ್ರಿಸಿ.

    **ಅಥವಾ (or)**

    ಮುದ್ದಣ – ಮನೋರಮೆಯರ ಸಂವಾದದ ಸ್ವಾರಸ್ಯವನ್ನು ವಿವರಿಸಿ.

II. ಜ್ಞಾನವನ್ನು ಹೊಂದುವ ಮಾರ್ಗ ಯಾವುದೆಂಬುದನ್ನು ಕವಿ ಹೇಗೆ ವಿವರಿಸಿದ್ದಾನೆ ?

**ಅಥವಾ (or)**

ವೃದ್ಧ ರ ತವಕ – ತಲ್ಲಣಗಳನ್ನು ಕವಯಿತ್ರಿ ಹೇಗೆ ಚಿತ್ರಿಸಿದ್ದಾರೆ ?

III. ಎಲ್ಲರ ನಿರೀಕ್ಷೆ ಸುಳ್ಳಾಗುವಂತೆ ಕೃಷ್ಣೇಗೌಡರು ಆನೆಯನ್ನು ಹೇಗೆ ಸಾಕಿದರು ?

**ಅಥವಾ (or)**

ನಾಗರಾಜನ ನಿಗೂಢ ಸಾವಿನ ಬಗ್ಗೆ ಜನರ ಅಭಿಪ್ರಾಯಗಳೇನು ?

12. ಕೆಳಗಿನವುಗಳಲ್ಲಿ ಯಾವುದಾದರೂ ಒಂದು ವಿಷಯದ ಬಗ್ಗೆ **150-200** ಪದಗಳಿಗೆ ಮೀರದಂತೆ ಪ್ರಬಂಧ ಬರೆಯಿರಿ. **1 × 5 = 5**

I. ಹೆಚ್ಚುತ್ತಿರುವ ವೃದ್ಧಾಶ್ರಮಗಳು

II. ಭ್ರಷ್ಟಾಚಾರ ನಿರ್ಮೂಲನೆಯಲ್ಲಿ ಯುವಕರ ಪಾತ್ರ

III. ರಾಷ್ಟ್ರೀಯ ಭಾವೈಕ್ಯತೆ

13. ವಿದ್ಯುತ್ತಿನ ಅಭಾವದಿಂದ ನಿಮ್ಮೂರಿನ ಜನರು ಎದುರಿಸುತ್ತಿರುವ ಸಮಸ್ಯೆಗಳನ್ನು ವಿವರಿಸಿ ಪತ್ರಿಕಾ ಸಂಪಾದಕರಿಗೆ ಒಂದು ಪತ್ರ ಬರೆಯಿರಿ. **1 × 5 = 5**

**ಅಥವಾ (or)**

ನಿಮ್ಮೂರಿನಲ್ಲಿ ಕುಡಿಯುವ ನೀರಿನ ಶುದ್ಧೀಕರಣ ಘಟಕವನ್ನು ಸ್ಥಾಪಿಸುವಂತೆ ಕೋರಿ ಗ್ರಾಮ ಪಂಚಾಯಿತಿ ಅಧ್ಯಕ್ಷರಿಗೆ ಪತ್ರ ಬರೆಯಿರಿ.